# ಪ್ರಾಣಿ - ಪಕ್ಷಿಗಳಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯತೆ

## ಸ್ವಚ್ಛತೆ ಕಾಪಾಡಿಕೊಳ್ಳುವಿಕೆ

ಪ್ರಕೃತಿಯಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವ ಕ್ರಿಯೆ ಹೇಗೆ ನಡೆಯುತ್ತದೆ? ಪ್ರಾಣಿಗಳು ಹೇಗೆ ಮತ್ತು ಏಕೆ ತಮ್ಮ ಸ್ವಚ್ಛತೆ ಕಾಪಾಡಿಕೊಳ್ಳುತ್ತವೆ ಎಂದು ನೀವು ಯೋಚಿಸಿದ್ದೀರಾ?



## ಕೊಕ್ಕುಗಳಿಂದ ಸ್ವಚ್ಛತೆ

ಪಕ್ಷಿಗಳು ತಮ್ಮ ಕೊಕ್ಕನ್ನು ನಾವು ಬಾಚಣಿಕೆಯಿಂದ ಕೂದಲನ್ನು ಬಾಚುವ ರೀತಿಯಲ್ಲಿ ಬಳಸುತ್ತವೆ! ಅವು ತಮ್ಮ ಕೊಕ್ಕಿನಿಂದ ಗರಿಗಳನ್ನು ನಯವಾಗಿಸಿ, ಅಲುಗಾಡಿಸಿ, ಮೆಲ್ಲಗೆ ಕುಕ್ಕುತ್ತಾ, ಪುಕ್ಕಗಳನ್ನು ನೇರಗೊಳಿಸಿ ಅದರೊಳಗಿನ ಕೊಳಕು ಅಥವಾ ಕೀಟಗಳನ್ನು ತೆಗೆದು ಹಾಕಿ ತಮ್ಮ ರೆಕ್ಕೆಗಳನ್ನು ಶುಚಿಗೊಳಿಸುತ್ತವೆ. ಪಕ್ಷಿಗಳು ಶುಚಿಗೊಳಿಸುವ ಈ ಕ್ರಮವನ್ನು '**ಪ್ರೀನಿಂಗ್**' ಎಂದು ಕರೆಯುತ್ತಾರೆ.

## ಕೆರೆದುಕೊಳ್ಳಲು ಕಾಲುಗಳು

ಕೆಲವು ಪಕ್ಷಿಗಳು ಕೆರೆದುಕೊಳ್ಳುವ ಮೂಲಕ ಶುಚಿಗೊಳ್ಳುತ್ತವೆ! ತಮ್ಮ ಬಾಲದ ಗರಿಗಳ ಬುಡದಿಂದ 'ಪ್ರೀನಿಂಗ್ ಎಣ್ಣೆ' ತೆಗೆದುಕೊಂಡು ತಮ್ಮ ಕೊಕ್ಕು ಮತ್ತು ಕಾಲುಗಳಿಂದ ಆ ಎಣ್ಣೆಯನ್ನು ತಮ್ಮ ಗರಿ-ಪುಕ್ಕಗಳ ಮೇಲೆಲ್ಲಾ ಹರಡಿಕೊಳ್ಳುತ್ತವೆ.





## ಮರಳಿನ ಸ್ನಾನ

ಗುಬ್ಬಚ್ಚಿಗಳಿಂದ ಹಿಡಿದು ಮಂಗಟ್ಟೆ ಪಕ್ಷಿಗಳವರೆಗೆ ಅನೇಕ ಪಕ್ಷಿಗಳು ಮರಳಿನಲ್ಲಿ ಅಥವಾ ಮಣ್ಣಿನಲ್ಲಿ ಸ್ನಾನ ಮಾಡುತ್ತವೆ. ಈ ಪಕ್ಷಿಗಳು ನೆಲದಲ್ಲಿ ಒಂದು ಸಣ್ಣ ಗುಂಡಿ ಮಾಡಿ ಅದರಲ್ಲಿ ಉರುಳಾಡಿ, ರೆಕ್ಕೆ ಬಡಿದು ತಮ್ಮ ಗರಿ ಪುಕ್ಕಗಳಿಗೆ ಮರಳನ್ನು ಲೇಪಿಸುತ್ತವೆ. ನಂತರ ಎದ್ದು ತಮ್ಮ ದೇಹವನ್ನು ಚೆನ್ನಾಗಿ ಕೊಡವಿ ಒಳಗಿರಬಹುದಾದ ಕೊಳಕು ಮತ್ತು ಸಣ್ಣ ಕೀಟಗಳನ್ನು ಹೊರಗೆಡವುತ್ತವೆ. ಅಲ್ಲದೆ, ಈ ಒಣಮರಳಿನ ಸ್ನಾನ ಹೆಚ್ಚುವರಿ 'ಪ್ರೀನಿಂಗ್ ಎಣ್ಣೆ' ಇದ್ದರೆ ಅದು ಹೀರಿಹೋಗುತ್ತದೆ.

? **ಪ್ರ. ತಮ್ಮ ರೆಕ್ಕೆ ಪುಕ್ಕಗಳನ್ನು ಪಕ್ಷಿಗಳು ಏಕೆ ಸ್ವಚ್ಛವಾಗಿಡಬೇಕು?**

ಚಿತ್ರ - ವಿನ್ಯಾಸ - ಅರಿ ಅಬ್ರಹಾಂ
ಕನ್ನಡಕ್ಕೆ - ಅನು ಮೋತಿ, ಮಾಧ್ಯಮ ಅನೇಕ ಪ್ರೈ. ಲಿ.
This work is licensed to Nature Classrooms under CC BY-SA4.0

Nature Classrooms
nature conservation foundation
Maadhyama Aneka ಮಾಧ್ಯಮ ಅನೇಕ


# ಪ್ರಾಣಿ - ಪಕ್ಷಿಗಳಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯತೆ

## ಸ್ವಚ್ಛತೆ  ಕಾಪಾಡಿಕೊಳ್ಳುವಿಕೆ

ಪ್ರಕೃತಿಯಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವ ಕ್ರಿಯೆ ಹೇಗೆ ನಡೆಯುತ್ತದೆ?

ಪ್ರಾಣಿಗಳು ತಮ್ಮ ಚರ್ಮ-ತುಪ್ಪಳ, ಪುಕ್ಕಗಳು, ಚರ್ಮದ ಇತರ ಭಾಗಗಳು, ಆಂಟೆನಾಗಳು ಮತ್ತು ರೆಕ್ಕೆಗಳು ಉತ್ತಮ ಸ್ಥಿತಿಯಲ್ಲಿ ಇಟ್ಟುಕೊಳ್ಳಲು ತಮ್ಮನ್ನು ತಾವು ಸ್ವಚ್ಛಗೊಳಿಸಿಕೊಳ್ಳುತ್ತ ಇರುತ್ತವೆ. ಈ ಶುಚಿಗೊಳಿಸಿಕೊಳ್ಳುವ ಅಥವಾ ಅಂದಗೊಳಿಸಿಕೊಳ್ಳುವ ನಡವಳಿಕೆ ಮೂಲಕ ಪ್ರಾಣಿಗಳು ತಮ್ಮ ದೇಹದಲ್ಲಿ ಇರಬಹುದಾದ ಬೇಡದಿರುವ ಕೀಟಗಳು, ಎಲೆಗಳು, ಕೊಳಕು ಮತ್ತು ಕೊಂಬೆಗಳಂತಹ ಅನಗತ್ಯ ಬಾಹ್ಯ ವಸ್ತುಗಳನ್ನು ನಿವಾರಿಸಿಕೊಳ್ಳುತ್ತವೆ.

**? ನಿಮ್ಮ ಸುತ್ತಲೂ ಒಮ್ಮೆ ನೋಡಿ - ಪ್ರಾಣಿಗಳು ತಮ್ಮನ್ನು ಶುಚಿಗೊಳಿಸಿಕೊಳ್ಳಲು, ಅಲಂಕರಿಸಿಕೊಳ್ಳಲು ತಮ್ಮ ದೇಹದ ಯಾವ ಭಾಗಗಳನ್ನು ಬಳಸುತ್ತವೆ?**



### ನಾಲಿಗೆಗಳು


ಮನೆಯ ಹಲ್ಲಿಗಳು / ಗೌಳಿಗಳು ತಮ್ಮ ನಾಲಿಗೆಯನ್ನು ಹುಳುಗಳನ್ನು ಬೇಟೆಯಾಡಿ ಹಿಡಿಯಲು, ತಮ್ಮ ಸುತ್ತಲಿನ ಪರಿಸರದ ವಾಸನೆಯನ್ನು ನೋಡಲು, ತಮ್ಮ ಕಣ್ಣುಗಳನ್ನು ಶುಚಿಗೊಳಿಸಿಕೊಳ್ಳಲು - ಹೀಗೆ ಅನೇಕ ಕೆಲಸಗಳಿಗೆ ಬಳಸುತ್ತವೆ. ನಿಮ್ಮ ಸುತ್ತಲಿರುವ ಪ್ರಾಣಿಗಳಲ್ಲಿ ಯಾವುವು ತಮ್ಮನ್ನು ನಾಲಿಗೆಯಿಂದ ಶುಚಿಗೊಳಿಸಿಕೊಳ್ಳುತ್ತವೆ?

### ಪಂಜಗಳು ಮತ್ತು ಉಗುರುಗಳು

ನೀರು ನಾಯಿಯಂತಹ ಪ್ರಾಣಿಗಳು ತಮ್ಮ ಚರ್ಮವನ್ನು / ತುಪ್ಪಳವನ್ನು ನೆಕ್ಕಲು ತಮ್ಮ ನಾಲಿಗೆಯನ್ನು ಬಳಸುತ್ತವೆ. ತಮ್ಮ ಪಂಜಗಳು ಮತ್ತು ಉಗುರುಗಳನ್ನು ಬಳಸಿ ಚರ್ಮದೊಳಗೆ ಇರಬಹುದಾದ ಕಸವನ್ನು ತೆಗೆದುಹಾಕುತ್ತವೆ. ತಮ್ಮ ಚರ್ಮವನ್ನು/ ತುಪ್ಪಳವನ್ನು ಬಾಚಿಕೊಳ್ಳಲು, ಒಣಗಿಸಿಕೊಳ್ಳಲು, ಮತ್ತು ಮಾಲೀಸು ಮಾಡಿಕೊಳ್ಳುವುದರಲ್ಲಿ ಸಾಕಷ್ಟು ಸಮಯವನ್ನು ಕಳೆಯುತ್ತವೆ.
ಬೇರೆ ಯಾವ ಪ್ರಾಣಿಗಳು ತಮ್ಮ ಪಂಜಗಳನ್ನು ಬಳಸಿ ಶುಚಿಮಾಡಿಕೊಳ್ಳುವುದನ್ನು ನೀವು ನೋಡಿದ್ದೀರಿ?



### ಬಾಯಿಗಳು ಮತ್ತು ಬಾಯಿಯ ಭಾಗಗಳು



ಜಿರಳೆಗಳು ಕೂಡ ತಮ್ಮನ್ನು ತಾವು ಸ್ವಚ್ಛವಾಗಿಟ್ಟುಕೊಳ್ಳಬೇಕು! ಜಿರಳೆ ತನ್ನ ಕಾಲುಗಳು ಮತ್ತು ಆಂಟೆನ್ನಾಗಳ ಕೊಳೆಯನ್ನು ತೆಗೆದುಹಾಕಲು ತನ್ನ ಬಾಯಿಯ ಭಾಗಗಳನ್ನು ಬಳಸುತ್ತದೆ. ಜಿರಳೆಗೆ ತನ್ನ ಪರಿಸರದ ವಾಸನೆ ಗ್ರಹಿಸಲು, ಅಪಾಯವನ್ನು ಗ್ರಹಿಸಲು ಮತ್ತು ಸರಾಗವಾಗಿ ತಿರುಗಾಡಲು ಸ್ವಚ್ಛ ಆಂಟೆನಾಗಳು ಮತ್ತು ಕಾಲುಗಳು ಮುಖ್ಯವಾಗಿದೆ.

ಚಿತ್ರ - ವಿನ್ಯಾಸ - ಅರಿ ಅಬ್ರಹಾಂ
ಕನ್ನಡಕ್ಕೆ - ಅನು ಮೋತಿ, ಮಾಧ್ಯಮ ಅನೇಕ ಪ್ರೈ. ಲಿ.
This work is licensed to Nature Classrooms under CC BY-SA4.0

Nature Classrooms  nature conservation foundation  Maadhyama Aneka ಮಾಧ್ಯಮ ಅನೇಕ

# ಪ್ರಾಣಿ - ಪಕ್ಷಿಗಳಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯತೆ

## ಸ್ವಚ್ಛತೆ ಕಾಪಾಡಿಕೊಳ್ಳುವಿಕೆ

ಪ್ರಕೃತಿಯಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವ ಕ್ರಿಯೆ ಹೇಗೆ ನಡೆಯುತ್ತದೆ?

ಪ್ರಾಣಿಗಳು ತಮ್ಮ ಪಂಜಗಳು ಮತ್ತು ಉಗುರುಗಳಿಂದ ದೇಹವನ್ನು ಬಾಚಿಕೊಳ್ಳುವುದು, ಕೊಕ್ಕಿನಿಂದ ಮಾಲೀಸು ಮಾಡಿಕೊಳ್ಳುತ್ತ, ಕೊಳೆಯನ್ನು ತೆಗೆದುಹಾಕುವುದು, ಅಥವಾ ನಾಲಿಗೆಯಿಂದ ತಮ್ಮ ಚರ್ಮ / ತುಪ್ಪಳವನ್ನು ನೆಕ್ಕಿಕೊಂಡು ಶುಚಿಗೊಳಿಸಿಕೊಳ್ಳುವುದು ಹೀಗೆ ಹಲವು ವಿಧಗಳಲ್ಲಿ ತಮ್ಮನ್ನು ತಾವು ಶುಚಿಯಾಗಿ ಇಟ್ಟುಕೊಳ್ಳುತ್ತವೆ. ಅನೇಕ ಬಾರಿ, ಪ್ರಾಣಿಗಳು ಒಂದನ್ನೊಂದು ಶುಚಿಯಾಗಿಟ್ಟುಕೊಳ್ಳಲು ಕೂಡ ಸಹಾಯ ಮಾಡುತ್ತವೆ.



ವಯಸ್ಕ ಪ್ರಾಣಿಗಳು ತಮ್ಮ ಮರಿಗಳು ಶುಚಿಯಾಗಿರಲು ಸಹಾಯ ಮಾಡಬಹುದು. ಇಗೋ, ಇಲ್ಲೊಂದು ತಾಯಿ ಚಿರತೆ ತನ್ನ ಮರಿಯನ್ನು ನೆಕ್ಕುತ್ತ, ಚರ್ಮವನ್ನು ಸ್ವಚ್ಛಗೊಳಿಸಿ, ಮಾಲೀಸು ಮಾಡುತ್ತಿದೆ.

ಮಂಗಗಳಂತಹ ಪ್ರಾಣಿಗಳು ಗುಂಪುಗಳಲ್ಲಿ ವಾಸಿಸುವವು. ಇಂತಹ ಗುಂಪಿನ ಪ್ರಾಣಿಗಳು ಪರಸ್ಪರರ ಮೈಮೇಲಿನ ಅನಗತ್ಯ ಕೀಟಗಳನ್ನು ಹೆಕ್ಕುತ್ತಾ, ಕೊಳೆಯನ್ನು ತೆಗೆಯುತ್ತಾ ಸದಾ ಸ್ವಚ್ಛತೆ ಕಾಪಾಡುವ ನಡುವಳಿಕೆ ತೋರಿಸುತ್ತವೆ. ಗುಂಪಿನ ಸದಸ್ಯ ಪ್ರಾಣಿಗಳ ನಡುವಿನ ಈ ರೀತಿಯ ಪರಸ್ಪರ ಕಾಳಜಿ ವಹಿಸುವ ನಡುವಳಿಕೆಯಿಂದ ಗುಂಪಿನ ನೈರ್ಮಲ್ಯ ಕಾಪಾಡುವುದಲ್ಲದೆ, ಗುಂಪಿನ ಸದಸ್ಯರ ನಡುವಿನ ಪರಸ್ಪರ ಬಂಧಗಳು ಬಲಗೊಳ್ಳುತ್ತವೆ.





ಅನೇಕ ಬಾರಿ ಎಮ್ಮೆಯ ಬೆನ್ನಿನ ಮೇಲೆ ಮೈನಾ, ಬೆಳ್ಳಕ್ಕಿ ಮುಂತಾದ ಹಕ್ಕಿಗಳು ಕುಳಿತಿರುವುದನ್ನು ನೀವು ಎಂದಾದರೂ ಗಮನಿಸಿದ್ದೀರಾ? ಆ ಹಕ್ಕಿಗಳು ಅಲ್ಲಿ ಏನು ಮಾಡುತ್ತಿವೆ ಎಂದು ನೀವು ಯೋಚಿಸಿದ್ದೀರಾ? ಎಮ್ಮೆಯ ಬೆನ್ನಿನ ಮೇಲೆ ಕುಳಿತ ಹಕ್ಕಿಗಳು ಎಮ್ಮೆಗೆ ತೊಂದರೆ ಕೊಡಬಹುದಾದ ಉಣುಗುಗಳಂತಹ ಕೀಟಗಳನ್ನು ತಿನ್ನುತ್ತವೆ. ಹಕ್ಕಿಯ ಈ ನಡುವಳಿಕೆಯಿಂದ ಎಮ್ಮೆ ಶುಚಿಯಾಗುವುದಲ್ಲದೆ ಹಕ್ಕಿಗೆ ಸುಲಭವಾದ ಊಟ ಸಿಕ್ಕಂತ್ತಾಗುತ್ತದೆ!

ಚಿತ್ರ - ವಿನ್ಯಾಸ - ಅರಿ ಅಬ್ರಹಾಂ
ಕನ್ನಡಕ್ಕೆ - ಅನು ಮೋತಿ, ಮಾಧ್ಯಮ ಅನೇಕ ಪ್ರೈ. ಲಿ.
This work is licensed to Nature Classrooms under CC BY-SA4.0

Nature Classrooms
nature conservation foundation
Maadhyama Aneka ಮಾಧ್ಯಮ ಅನೇಕ